## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 29-12-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 232/2022 ಕಲಂ 392 ಐಪಿಸಿ :-

ದಿನಾಂಕ 28/12/2022 ರಂದು 2215 ಗಂಟೆಗೆ ಫಿರ್ಯಾದುದಾರರಾದ ಶ್ರೀಮತಿ ಸುಜಾತಾ ಗಂಡ ರವಿಂದ್ರ ಕೊರಳ್ಳಿ, ವಯ:57 ವರ್ಷ ಜಾತಿ:ಲಿಂಗಾಯತ ಉ:ವಿಕಾಸ ಬ್ಯಾಂಕಿನಲ್ಲಿ ಸಿನಿಯರ ಆಫಿಸರ ಕೆಲಸ ಸಾ/ಮನೆ. ನಂ.8-9-270/29 ಗುರುನಾನಕ ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ದಿನಾಂಕ 28/12/2022 ರಂದು ಸಾಯಂಕಾಲ ಫರ್ಯಾದಿ ತನ್ನ ಮಗಳಾದ ಗೌರಿ ಇಬ್ಬರೂ ಕೂಡಿಕೊಂಡು ಗುರುನಾನಕ ಗೇಟ ಎದುರಿಗೆ ಇರುವ ಅಪೊಲೊ ಮೆಡಿಕಲದಿಂದ ಔಷಧಿ ತೆಗೆದುಕೊಂಡು ಮರಳಿ ಗುರುನಾನಕ ಗೇಟ ಹತ್ತೀರ ಬರುತ್ತಿರುವಾಗ 8:55 ಪಿ.ಎಮ್. ಗಂಟೆಯ ಸುಮಾರಿಗೆ ಎದುರಿನಿಂದ ಇಬ್ಬರು ಅಪರಿಚಿತ ವ್ಯಕ್ತಿಗಳು ಒಂದು ನೀಲಿ ಬಣ್ಣದ ಮೊಟರ ಸೈಕಲ ಮೇಲೆ ಬಂದು ಹಿಂದೆ ಕುಳಿತ ವ್ಯಕ್ತಿ ಫರ್ಯಾದಿ ಕೊರಳಲ್ಲಿದ್ದ 30 ಗ್ರಾಂ ತೂಕದ ಬಂಗಾರದ ಮಂಗಳಸೂತ್ರ ಅ.ಕಿ.1,20,000/-ರೂ ನೇದನ್ನು ಕಿತ್ತುಕೊಂಡು ಕಳ್ಳರು ಮೊಟರ ಸೈಕಲನ್ನು ಓಡಿಸಿಕೊಂಡು ಬಸ್ ನಿಲ್ದಾಣದ ಕಡೆಗೆ ಹೋಗಿರುತ್ತಾರೆ. ಅಪರಿಚಿತ ವ್ಯಕ್ತಿಗಳು ಅಂದಾಜು 20-25 ವರ್ಷದವರಾಗಿರುತ್ತಾರೆ. ಮೊಟರ ಸೈಕಲ ಓಡಿಸುವ ವ್ಯಕ್ತಿ ಕಪ್ಪು ಜಾಕೇಟ ಹಾಕಿದ್ದು, ಹಿಂದೆ ಕುಳಿತ ವ್ಯಕ್ತಿ ಬೂದು ಬಣ್ಣದ ಟೊಪಿಇದ್ದ ಜಾಕೇಟ ಧರಿಸಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬಸವಕಲ್ಯಾಣ ಸಂಚಾರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 77/2022 ಕಲಂ 279, 337, 304(ಎ), 283 ಐಪಿಸಿ ಜೊತೆ 187 ಐಎಮ್.ವಿ. ಕಾಯ್ದೆ :-

ದಿನಾಂಕ 26/12/2022 ರಂದು ಫಿರ್ಯಾದಿ ಶ್ರೀ ಭಾರ್ಗವ ತಂದೆ ಬಾಲಕಿಶನ ಕೊಮರಶೆಟ್ಟಿ, ವಯ: 20 ವರ್ಷ, ಸಾ: 8-14/19, ಕೊಹೇಡಾ, ತಾ: ಅಬ್ದುಲ್ಲಾಪೂರಮೇಟ, ಜಿ: ರಂಗಾರೆಡ್ಡಿ (TS) ರವರು ನೀಡಿದ ದೂರಿನ ಸಾರಾಂಶವೆನೆಂದರೆ ಫಿರ್ಯಾದಿಯು ತನ್ನ ಕುಟುಂಬದವರಾದ ತಂದೆ ಬಾಲಕಿಶನ, ತಾಯಿ ವಿಜಯಾ, ತಂಗಿ ಶ್ರೀಜಾ, ದೊಡ್ಡಮ್ಮ ಉಮಾ ದೊಡ್ಡಮ್ಮನ ಮಗ ಧ್ರುವ ಮತ್ತು ಡ್ರೈವರ್ ಭಾಸ್ಕರ್ ಚಾರಿ ಟೊಯೋಟಾ ಇನ್ನೋವಾ ಕಾರ್ ನಂಬರ್ ಎಪಿ29ಎಟಿ6039 ನೇದ್ದನ್ನು ತೆಗೆದುಕೊಂಡು ಎಲ್ಲರೂ ಮಹಾರಾಷ್ಟ್ರದ ಶಿರಡಿ ಸಾಯಿಬಾಬನ ದರ್ಶನಕ್ಕೆ ಹೋಗಿ ದೇವರ ದರ್ಶನ ಪಡೆದುಕೊಂಡು ಮರಳಿ ಬರುವಾಗ ದಿನಾಂಕ 28.12.2022ರಂದು ರಾತ್ರಿ 01:30 ಗಂಟೆ ಸುಮಾರಿಗೆ ಸಸ್ತಾಪುರ್ ಬಂಗ್ಲ ಹತ್ತಿರ ಕಾರಿನಲ್ಲಿ ಡೀಸೆಲ್ ಹಾಕಿಸಿಕೊಂಡು ನಮ್ಮ ಡ್ರೈವರ್ ಭಾಸ್ಕರ್ ನಿಗೆ ನಿದ್ರೆ ಬರುತ್ತಿದ್ದರಿಂದ ನಾನು ಕಾರ್ ಚಲಾಯಿಸಿಕೊಂಡು ಮುಂಬೈ ಹೈದರಾಬಾದ್ ರಾ.ಹೇ ನಂಬರ್ 65 ರ ಮುಖಾಂತರ ಹೈದರಾಬಾದ್ ಕಡೆಗೆ ಹೋಗುವಾಗ ತಿರ್ಯಾದಡೋಳಾ-ರಾಜೇಶ್ವರ ಮಧ್ಯದಲ್ಲಿ ಯೂ ಟರ್ನ್ ಹತ್ತಿರ ಎರಡು ಲಾರಿಗಳು ರಸ್ತೆಯ ಮೇಲೆ ಸಂಚಾರಕ್ಕೆ ಅಡೆತಡೆಯಾಗುವ ರೀತಿಯಲ್ಲಿ ಒಂದರ ಪಕ್ಕ ಒಂದು ನಿಲ್ಲಿಸಿದ್ದರಿಂದ ಮುಂದಕ್ಕೆ ಹೋಗಲು ದಾರಿ ಇರದೆ ಇರುವುದರಿಂದ ಲಾರಿಯ ಹಿಂದೆ ಇಂಡಿಕೇಟರ್ ಹಾಕಿ ಕಾರ್ ನಿಲ್ಲಿಸಿದೆನು. ಅದೇ ಸಮಯಕ್ಕೆ ತಡೋಳಾ ಕಡೆಯಿಂದ ಒಬ್ಬ ಲಾರಿ ಚಾಲಕನು ತನ್ನ ಲಾರಿಯನ್ನು ಅತಿ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ತನ್ನ ಲಾರಿ ನಿಯಂತ್ರಿಸಲಾಗದೆ ಡಿವೈಡರ್ ಮೇಲೆ ಹಾಯಿಸಿ ಫಿರ್ಯಾದಿ ಕಾರಿನ ಮೇಲೆ ಸದರಿ ಲಾರಿಯು ಟೈರ್ ಲೋಡ್ ಸಮೇತ ಕಾರಿನ ಮೇಲೆ ಬಿದ್ದಿರುತ್ತದೆ. ಅದರ ಪರಿಣಾಮ ನಮ್ಮ ಕಾರಿನ ಟಾಪ್ ಪೂರ್ತಿ ಜಖಂಗೊಂಡು ತಂದೆಯ ಮೇಲೆ ಭಾರ ಬಿದ್ದಿದ್ದರಿಂದ ನಮ್ಮ ತಂದೆಯವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಕಾರಿನಲ್ಲಿದ್ದ ಶ್ರೀಜಾ ಇವಳಿಗೆ ಎಡಕಾಲು ಮೊಳಕಾಲಿಗೆ ಗುಪ್ತ ಗಾಯ, ದೊಡ್ಡಮ್ಮ ಇವಳಿಗೆ ಎಡಕಾಲು ಮೊಳಕಾಲು ಕೆಳಗೆ ಗುಪ್ತ ಗಾಯ, ಅವಳ ಮಗ ಧ್ರುವ ಇವನಿಗೆ ಸೊಂಟದಲ್ಲಿ ಗುಪ್ತ ಗಾಯವಾಗಿರುತ್ತದೆ. ಉಳಿದವರಿಗೆ ಗಾಯಗಳಾಗಿರುವುದಿಲ್ಲ. ಡಿಕ್ಕಿ ಮಾಡಿದ ಲಾರಿ ನಂಬರ್ ನೋಡಲು ಕೆಎ563574 ಇರುತ್ತದೆ. ಲಾರಿಚಾಲಕನು ತನ್ನ ಲಾರಿ ಬಿಟ್ಟು ಕತ್ತಲಲ್ಲಿ ಓಡಿ ಹೋದನು. ಅವನಿಗೆ ಮತ್ತೆ ನೋಡಿದಲ್ಲಿ ಗುರುತಿಸುತ್ತೇನೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.